


ಬಾಲಕ ಕುಮಾರ

# ಗ್ರಾಮೋಫೋನಿಗೆ ಮರುಳಾದ ಹುಡುಗ


ಕುಮಾರ ಗಂಧರ್ವರು ಜನಿಸಿದ್ದು ಸೂಳೆಭಾವಿ ಎಂಬ ಕುಗ್ರಾಮದಲ್ಲಿ.[1] ಬೆಳಗಾವಿಯಿಂದ ಪೂರ್ವಕ್ಕೆ ಸುಮಾರು ಇಪ್ಪತ್ತು ಕಿಲೋಮೀಟರ್‌ಗಳ ಅಂತರದಲ್ಲಿ ದಕ್ಷಿಣೋತ್ತರವಾಗಿ ಹರಡಿದ ಗುಡ್ಡಗಳ ಪದತಲದಲ್ಲಿ ಬೆಳೆದಿರುವ ಹಳ್ಳಿಯಿದು. ಬೆಳಗಾವಿಯಿಂದ ರಾಯಚೂರಿಗೆ ಸಾಗುವ ದಾರಿಯಲ್ಲಿ ಸಾಗಿದರೆ, ಸುಮಾರು ಇಪ್ಪತ್ತು ಕಿಲೋಮಿಟರ್‌ಗಳ ಅಂತರದಲ್ಲಿ ಮಾರಿಹಾಳ ಎಂಬ ಗ್ರಾಮ ಸಿಗುತ್ತದೆ. ಅಲ್ಲಿರುವ ಪೋಲೀಸ್ ಠಾಣೆ ಪಕ್ಕದಲ್ಲಿ ಎಡಕ್ಕೆ ಒಂದು ಚಿಕ್ಕದಾದ ಟಾರುರಸ್ತೆಯಿದೆ. ಆ ದಾರಿಯಲ್ಲಿ ಸುಮಾರು ಒಂದು ಕಿಲೋಮೀಟರ್ ಸಾಗಿದರೆ ಸಿಗುವ ಹಳ್ಳಿಯೇ ಸೂಳೆಭಾವಿ. ಇದು ಕುಮಾರ ಗಂಧರ್ವ ಎಂಬ ಅಪ್ರತಿಮ ಗಾಯಕನಿಗೆ ಜನ್ಮ ನೀಡಿದ ಊರು.[1]

ಕುಮಾರರು ಜನಿಸಿದ್ದು ಏಪ್ರಿಲ್ 8, 1924ರಂದು. ತಂದೆ ಸಿದ್ಧರಾಮಯ್ಯ. ತಾಯಿ ಗುರುಸಿದ್ಧವ್ವ, ಇವರದು ಜಂಗಮ ಮನೆತನವಾಗಿದ್ದರೂ, ಅವಲಂಬಿಸಿದ್ದು ಸರಾಫಿ ವೃತ್ತಿಯನ್ನು. ಆ ಕಾಲದಲ್ಲಿ ಬೆಳಗಾವಿ ಜಿಲ್ಲೆಯ ಕೆಲವು ಲಿಂಗಾಯತ ಹಾಗೂ ಜಂಗಮ ಮನೆತನಗಳು ಸರಾಫಿ ವೃತ್ತಿಯನ್ನು ಅವಲಂಬಿಸಿದ್ದು ಐತಿಹಾಸಿಕ ಸಂಗತಿ. ಅವುಗಳಲ್ಲಿ ಕುಮಾರರ ಕೋಮಕಾಳಿಮಠ ಮನೆತನವೂ ಒಂದು. ಗುರುಸಿದ್ಧಯ್ಯನವರು ಅಣ್ಣ ದುಂಡಯ್ಯನವರೊಂದಿಗೆ ಪಾಲು ಮಾಡಿಕೊಂಡಾಗ ಗುರುಸಿದ್ಧಯ್ಯನವರು ಹೆಂಡತಿಯ ತವರುಮನೆ ಸೂಳೆಭಾವಿಗೆ ಬಂದು ಅಲ್ಲಿ ಸರಾಫಿ ವೃತ್ತಿಯನ್ನು ಮುಂದುವರಿಸಿದರು.

ಸಿದ್ಧರಾಮಯ್ಯನವರದು ತುಂಬಿದ ಮನೆ. ಚೊಚ್ಚಲ ಮಗ ಶಿವರುದ್ರಯ್ಯ, ನಂತರ ಗಂಗಾಧರಯ್ಯ, ಆಮೇಲೆ ಶಿವಪುತ್ರಯ್ಯ (ಇವರೇ ಮುಂದೆ ಕುಮಾರ



ಕುಮಾರರ ತಂದೆ ಸಿದ್ಧರಾಮಯ್ಯನವರು



ಕುಮಾರರ ತಾಯಿ ಗುರುಸಿದ್ಧವ್ವ

ಗಂಧರ್ವರೆನಿಸಿದರು.) ತದನಂತರ ಶಂಕರಯ್ಯ, ಶಾಂತವೀರಯ್ಯ ಹಾಗೂ ರಾಜಮ್ಮ ಹೀಗೆ ಸಂಸಾರದ ಬಳ್ಳಿ ವಿಸ್ತಾರವಾಗಿ ಹಬ್ಬಿತ್ತು. ಇಷ್ಟು ವಿಶಾಲವಾದ ಕುಟುಂಬಕ್ಕೆ ಸಾಕಾಗುವಷ್ಟು ಆದಾಯ ಸೂಳೆಭಾವಿಯಂಥ ಹಳ್ಳಿಯಲ್ಲಿ ಸರಾಫಿ ವೃತ್ತಿಯಿಂದ ದೊರಕುತ್ತಿರಲಿಲ್ಲವಾದ್ದರಿಂದ ಬಡತನವೇ ಮಂದ್ರ, ಮಧ್ಯ, ತಾರಸಪ್ತಕಗಳಲ್ಲಿ ಗಾನವಿಹಾರ ಮಾಡುತ್ತಿತ್ತು.


ಕುಮಾರರ ತಂದೆ ಸಿದ್ಧರಾಮಯ್ಯನವರು ಒಳ್ಳೆಯ ಹಾಡುಗಾರರು. ಗದುಗಿನ ಪಂಚಾಕ್ಷರಿ ಗವಯಿಗಳ ಶಿಷ್ಯರು. ಸಂಗೀತಲೋಕದ ದಂತಕತೆ ಉಸ್ತಾದ ಅಬ್ದುಲ್ ಕರೀಂಖಾನ ಸಾಹೇಬರು ಮತ್ತು ಅವರ ಹಾಡುಗಾರಿಕೆ ಎಂದರೆ ಪ್ರಾಣಕ್ಕಿಂತ ಪ್ರಿಯ. ಉಸ್ತಾದ ಅಬ್ದುಲ್ ಕರೀಂಖಾನರು ಬೆಳಗಾವಿಯಲ್ಲಿ ಕೆಲವು ಕಾಲ ನೆಲೆಸಿದ್ದ ಕಾರಣವಾಗಿ ಅವರ ಪ್ರಭಾವಕ್ಕೆ ಸಿದ್ಧರಾಮಯ್ಯನವರು ಒಳಗಾಗಿರುವ ಸಾಧ್ಯತೆಯಿದೆ. ತಮ್ಮ ಮಕ್ಕಳು ಅವರಂತೆ ಹಾಡಬೇಕು ಎಂಬುದು ಅವರ ಕನಸು. ಹಾಗಾಗಿ ಅವರು ಸಂಗೀತದೀಕ್ಷೆ ನೀಡಲು ಮೊದಲು ಆಯ್ದುಕೊಂಡದ್ದು ಹಿರಿಯ ಮಗ ಶಿವರುದ್ರಯ್ಯನವರನ್ನು. ಆಗ ನಾಲ್ಕೈದು ವರ್ಷದ ಬಾಲಕನಾಗಿದ್ದ ಶಿವಪುತ್ರ ತಂದೆಯು ಅಣ್ಣನಿಗೆ (ಶಿವರುದ್ರಯ್ಯ) ನೀಡುತ್ತಿದ್ದ ಸಂಗೀತ ಶಿಕ್ಷಣವನ್ನು ಗಮನವಿಟ್ಟು ಕೇಳುತ್ತಿದ್ದ. ಜೊತೆಗೆ ಪಕ್ಕದ ಮನೆಯ ಮಲ್ಲೇಶಪ್ಪ ಅನಿಗೋಳ ಅವರ ಮನೆಯಲ್ಲಿದ್ದ ಗ್ರಾಮೋಫೋನ್‌ಗಳನ್ನೂ ಕೇಳುತ್ತಿದ್ದ. ಮಲ್ಲೇಶಪ್ಪ ಅನಿಗೋಳರು ಹೊಸ ಹೊಸ ರೆಕಾರ್ಡುಗಳು ಬಂದಾಗಲೆಲ್ಲ ಇವನನ್ನು ಕರೆದು ಕೇಳಿಸುತ್ತಿದ್ದರು. ಅವುಗಳನ್ನೂ ಆತ ಗಮನವಿಟ್ಟು ಕೇಳುತ್ತಿದ್ದ. ಆಗಿನ ಖ್ಯಾತ


ಗಾಯಕರಾಗಿದ್ದ ಉಸ್ತಾದ ಅಬ್ದುಲ್ ಕರೀಂಖಾನ್‌ರ ರೆಕಾರ್ಡುಗಳನ್ನು ಕೇಳುವುದು ಪ್ರತಿಷ್ಠೆಯ ವಿಷಯವಾಗಿತ್ತು. ಹಾಗಾಗಿ ಮಲ್ಲೇಶಪ್ಪ ಅನಿಗೋಳರ ಮನೆಯಲ್ಲಿ ಅವು ಸಂಗ್ರಹಗೊಂಡಿದ್ದುವು.

ಆಗಿನ ಕಾಲದ ಶ್ರೀಮಂತರು ಮತ್ತು ಸಂಸ್ಥಾನಿಕರು ಗ್ರಾಮೋಫೋನ್ ಇಟ್ಟುಕೊಳ್ಳುವುದು ಪ್ರತಿಷ್ಠೆಯ ವಿಷಯವೆಂದು ಭಾವಿಸಿದ್ದರು. ಸೂಳೆಭಾವಿಯ ಶ್ರೀಮಂತ ಮಲ್ಲೇಶಪ್ಪ ಅನಿಗೋಳರೂ ಈ ಸಾಲಿಗೆ ಸೇರುತ್ತಾರೆ. ಜನಸಾಮಾನ್ಯರಿಗೆ ಗ್ರಾಮೋಫೋನ್ ಕೇಳಲು ಸಿಗುವುದು ಸುಲಭ ಸಾಧ್ಯವಾಗಿರಲಿಲ್ಲ. ಅನೇಕ ಕಂಪನಿಗಳು ಭಾರತದಲ್ಲಿ ಗ್ರಾಮೋಫೋನ್ ವ್ಯಾಪಾರವನ್ನು ಪ್ರಾರಂಭಿಸಿದುವು. ವಿದೇಶದಿಂದ ಭಾರತಕ್ಕೆ ಗ್ರಾಮೋಫೋನ್‌ಗಳು ಆಮದಾಗತೊಡಗಿದುವು. ಅವು ಭಾರತೀಯರ ಜೀವನದ ಭಾಗವಾಗಿ ಬೆಳೆಯತೊಡಗಿದುವು.

ಗ್ರಾಮೋಫೋನ್ ಹುಟ್ಟಿದ್ದು ಅಮೇರಿಕೆಯಲ್ಲಿ. ಥಾಮಸ್ ಎಡಿಸನ್ 6 ಡಿಸೆಂಬರ್ 1877ರಂದು ಗ್ರಾಮೋಫೋನ್‌ನ ಪೇಟೆಂಟ್‌ನ್ನು ಅಮೇರಿಕೆಯಲ್ಲಿ ದಾಖಲಿಸಿದ ಮತ್ತು ಮೊದಲ ಬಾರಿಗೆ ಅದನ್ನು 22 ಡಿಸೆಂಬರ್ 1877ರಂದು ಸಾರ್ವಜನಿಕವಾಗಿ ಪ್ರಯೋಗಿಸಿದ. ಅಲ್ಲಿಂದ ಗ್ರಾಮೋಫೋನ್ ಇತಿಹಾಸ ಪ್ರಾರಂಭವಾಗುತ್ತದೆ. ಕಾಲಾಂತರದಲ್ಲಿ ಅದರಲ್ಲಿ ಅನೇಕ ಸುಧಾರಣೆಗಳು ಕಂಡುಬಂದು ಅದು ಪರಿಪೂರ್ಣತೆಯನ್ನು ಪಡೆಯಿತು. 1907ರಲ್ಲಿ ಹಿಸ್ ಮಾಸ್ಟರ್ಸ್ ವಾಯ್ಸ್ ಕಂಪನಿ ಹುಟ್ಟಿಕೊಂಡ ನಂತರ ಗ್ರಾಮೋಫೋನಿಗೆ ಜಾಗತಿಕ ಮಟ್ಟದಲ್ಲಿ ಪ್ರಚಾರ ಮತ್ತು ಮಾನ್ಯತೆ ಪ್ರಾಪ್ತವಾಯಿತು. ಇದಕ್ಕಿಂತ ಮೊದಲೇ ಅಂದರೆ 1902ರಲ್ಲಿ ಗ್ರಾಮೋಫೋನ್ ಭಾರತಕ್ಕೆ ಕಾಲಿಟ್ಟಾಗಿತ್ತು. ಗೋಹರಜಾನ್ ಕಲ್ಕತ್ತೆವಾಲಿ ಗ್ರಾಮೋಫೋನ್‌ದ ಮೊದಲ ಸುಪ್ರಸಿದ್ಧ ಗಾಯಕಿ ಎನಿಸಿದಳು. ಭಾರತದಲ್ಲಿ ಗ್ರಾಮೋಫೋನ್‌ಗಳ ಬೇಡಿಕೆಯನ್ನು ಹೆಚ್ಚಿಸಿಕೊಳ್ಳಲು ಆ ಕಂಪನಿಗಳು ಇಲ್ಲಿನ ಗಾಯಕರ ಧ್ವನಿಮುದ್ರಿಕೆಗಳನ್ನು ಮಾರುಕಟ್ಟೆಗೆ ತಂದುವು. ಆ ಕಾಲದಲ್ಲಿ ಭಾರತದ ಅನೇಕ ಗಾಯಕರು ಗ್ರಾಮೋಫೋನ್‌ಗಳಿಗಾಗಿ ಹಾಡಿದ್ದಾರೆ. 1937ರಲ್ಲಿ ಹಿಸ್ ಮಾಸ್ಟರ್ಸ ವಾಯ್ಸ್ ಕಂಪನಿ ಬೆಳಗಾವಿಯಲ್ಲಿ ನಾಲ್ಕು ತಿಂಗಳು ವಾಸ್ತವ್ಯಹೂಡಿ, ಪಂ. ಮಲ್ಲಿಕಾರ್ಜುನ ಮನ್ಸೂರ್ ಅವರ ನೇತೃತ್ವದಲ್ಲಿ ಸ್ಥಳೀಯ ಕಲಾವಿದರ ಹಾಡುಗಳನ್ನು ಧ್ವನಿಮುದ್ರಿಸಿಕೊಳ್ಳಲು ಇರುವ

ಉಸ್ತಾದ ಅಬ್ದುಲ್ ಕರೀಂಖಾನ್ ಸಾಹೇಬರು





ಕುಮಾರಗಂಧರ್ವರು ಜನಿಸಿದ ಮನೆ-ಈಗಿರುವಂತೆ.

ಕಾರಣ ಈ ಭಾಗದಲ್ಲಿ ಗ್ರಾಮೋಫೋನ್ ಜನಪ್ರಿಯಗೊಳಿಸಿ, ತನ್ನ ಮಾರುಕಟ್ಟೆಯನ್ನು ವಿಸ್ತರಿಸಿಕೊಳ್ಳುವುದೇ ಆಗಿತ್ತು. ಹೀಗೆ ಭಾರತೀಯ ಕಲಾವಿದರನ್ನು ಬಳಸಿಕೊಂಡು ಗಾನತಟ್ಟೆಗಳನ್ನು ಬಿಡುಗಡೆಗೊಳಿಸಿದ್ದು ಇಂದಿಗೆ ಇತಿಹಾಸ. ಹಾಗೆ ಹಾಡಿದವರಲ್ಲಿ ಉಸ್ತಾದ ಅಬ್ದುಲ್ ಕರೀಂಖಾನ್ ಸಾಹೇಬರೂ ಒಬ್ಬರು. ಇಂಥ ಧ್ವನಿಮುದ್ರಿಕೆಗಳನ್ನು ಮಲ್ಲೇಶಪ್ಪ ಅನಿಗೋಳ ಅವರು ಸಂಗ್ರಹಿಸಿದ ಕಾರಣವಾಗಿ ಬಾಲಕ ಶಿವಪುತ್ರನಿಗೆ ಅವುಗಳನ್ನು ಕೇಳುವ ಅವಕಾಶ ಲಭಿಸಿತು.

ಉಸ್ತಾದ ಅಬ್ದುಲ್ ಕರೀಂಖಾನ್ ಸಾಹೇಬರ ಹಾಡುಗಾರಿಕೆಯನ್ನು ಕೇಳುವ ಹವ್ಯಾಸವೇ ಬಾಲಕ ಶಿವಪುತ್ರನಲ್ಲಿ ಒಬ್ಬ ಗಾಯಕನನ್ನು ರೂಪಿಸಿತು ಎಂದು ಹೇಳಿದರೆ ತಪ್ಪಾಗಲಿಕ್ಕಿಲ್ಲ. ದಿನಗಳೆದಂತೆ ಆತ ಆ ರೆಕಾರ್ಡುಗಳಲ್ಲಿರುವುದನ್ನು ಚಾಚೂ ತಪ್ಪದಂತೆ ಹಾಡುವುದನ್ನು ರೂಢಿಸಿಕೊಂಡ. ಬಾಲಕ ಶಿವಪುತ್ರ ಹಾಡಲಾರಂಭಿಸಿದ ಮೇಲೆ ಮನೆಯೊಳಗಿನ ವಾತಾವರಣವೇ ಬದಲಾಯಿತು. ಕುಮಾರರ ಅಣ್ಣ ಮನೆಯಲ್ಲಾದ ಈ ಬದಲಾವಣೆಯನ್ನು ಹೀಗೆ ನೆನಪಿಸಿಕೊಳ್ಳುತ್ತಾರೆ, "ಕುಮಾರ ಸಾ ಹಚ್ಚಿದ ಮ್ಯಾಲ ನಾವಿಬ್ಬರೂ (ತಂದೆ ಸಿದ್ಧರಾಮಯ್ಯ ಮತ್ತು ಶಿವರುದ್ರಯ್ಯ) ಹಾಡುವುದನ್ನೇ ನಿಲ್ಲಿಸಿದೆವು. ಸಿಟ್ಟಿನ ಸ್ವಭಾವದ ಮತ್ತು ತಾವು ಹೇಳಿದಂತೆಯೇ ಆಗಬೇಕೆನ್ನುವ ಹಟದ ನಮ್ಮ ತಂದೆ ನಮ್ರತೆಯಿಂದ ಕುಮಾರನಿಗೆ ತಂಬೂರಿ ಸಾಥ್ ನೀಡತೊಡಗಿದರು ಮತ್ತು ನಾನು ಹಾಡುವುದನ್ನು ಬಿಟ್ಟು ಕುಮಾರರ ಉಸ್ತುವಾರಿಯನ್ನು ನೋಡಿಕೊಳ್ಳತೊಡಗಿದೆ." ಶಿವಪುತ್ರನ ಮೊದಲ ಸ್ವರಗಳು ಮಾಡಿದ ಪರಿಣಾಮವೇ ಇಷ್ಟು ಪ್ರಭಾವಶಾಲಿಯಾಗಿತ್ತು – ಆರಂಭಿಕ ಸ್ವರದಲ್ಲೇ ಶ್ರೋತೃಗಳನ್ನು ಕಟ್ಟಿಹಾಕುವಂತೆ!

ಕುಮಾರರ ಅಣ್ಣ ಶಿವರುದ್ರಯ್ಯನವರೂ ಒಳ್ಳೆಯ ಗಾಯಕರಾಗಿದ್ದರು. ಆಕಾಶವಾಣಿಯಿಂದ ಮನ್ನಣೆ ಪಡೆದ ಗಾಯಕರಾಗಿದ್ದರು. ಆದರೆ ಕುಮಾರರಷ್ಟು ಎತ್ತರದ ಸಾಧನೆಯನ್ನು ಮಾಡುವುದು ಅವರಿಗೆ ಹಲವು ಕಾರಣಗಳಿಂದ ಸಾಧ್ಯವಾಗಲಿಲ್ಲ. ಅಂಥ ಅವಕಾಶಗಳೂ ಅವರಿಗೆ ಒದಗಿಬರಲಿಲ್ಲ.

ಕುಮಾರರೂ ತಮ್ಮ ಬಾಲ್ಯವನ್ನು ನೆನಪಿಸಿಕೊಳ್ಳುತ್ತಾರೆ – "ನಾನು ಮೊದಲು ಹಾಡುತ್ತಲೇ ಇರಲಿಲ್ಲ. ತಂದೆ ಮತ್ತು ಅಣ್ಣ ಮಾತ್ರ ಮನೆಯಲ್ಲಿ ಹಾಡುತ್ತಿದ್ದರು. ಆಗ ಗ್ರಾಮೋಫೋನ್‌ಗಳಿದ್ದುವು. ನಾನು ಅವುಗಳನ್ನು ನಕಲು ಮಾಡತೊಡಗಿದೆ. ನಾನು ಹಾಡುವುದನ್ನು ಅಕಸ್ಮಾತ್ ಕೇಳಿದ ತಂದೆ ಮೂಕರಾದರು. ನಾನು ಹಾಡತೊಡಗಿದ ಮೇಲೆ ಉಳಿದವರೆಲ್ಲ ಹಾಡುವುದನ್ನೇ ನಿಲ್ಲಿಸಿಬಿಟ್ಟರು." ಕುಮಾರರ ಹಾಡು ಕೇಳಿ ಮನೆಮಂದಿಯೆಲ್ಲ ಮೌನವಾದ ಕತೆಯಿದು.

ಭಾರತದ ಸುಪ್ರಸಿದ್ಧ ಗಾಯಕರ ಹಾಡುಗಳನ್ನೆಲ್ಲ ನಕಲು ಮಾಡುತ್ತಿದ್ದ ಶಿವಪುತ್ರ ಯಾನೆ ಕುಮಾರ ಕ್ರಮೇಣ ಆ ಕಾಲದ ಅಚ್ಚರಿಯಾಗಿ ಬೆಳೆದ. ನಿಧಾನವಾಗಿ ಸಾರ್ವಜನಿಕ ಕಾರ್ಯಕ್ರಮಗಳಿಗೆ ತೆರೆದುಕೊಂಡ. ತಂದೆಯ ಮೇಲುಸ್ತುವಾರಿಯಲ್ಲಿ ಅನೇಕ ಸಾರ್ವಜನಿಕ ಕಾರ್ಯಕ್ರಮಗಳು ಜರುಗಿದವು. ಅಲ್ಲೆಲ್ಲ ಕುಮಾರ ಪ್ರಸಿದ್ಧ ಗಾಯಕರ ಗಾನತಟ್ಟೆಯೊಳಗಿನ ಮೂರು –ಮೂರೂವರೆ ನಿಮಿಷದ ಗಾಯನವನ್ನು ತದ್ರೂಪವಾಗಿ ಹಾಡಿ ಜನರನ್ನು ಅಚ್ಚರಿಗೆ ನೂಕಿದ. ಜನ "ಏನಿದು ಅದ್ಭುತ!" ಎಂದು ಉದ್ಗರಿಸಿದರು. ನಿಧಾನವಾಗಿ ಶಿವಪುತ್ರನ ಖ್ಯಾತಿ ಬೆಳಗಾವಿ ಶಹರದ ಸುತ್ತಲೆಲ್ಲ ಹರಡತೊಡಗಿತು. ಗಾನಪುಷ್ಪ ಕಂಪು ಸೂಸತೊಡಗಿತು.

ಆಗೆಲ್ಲ ಮನರಂಜನೆಯ ಸಾಧನವಾಗಿ ಇದ್ದದ್ದು ಸಂಗೀತ ಮತ್ತು ನಾಟಕಗಳು ಮಾತ್ರ. ಆದರೆ ಇವೆರಡೂ ಸುಲಭವಾಗಿ ದೊರೆಯುತ್ತಿರಲಿಲ್ಲ. ನಾಟಕಗಳು ಶಹರದೂರುಗಳಲ್ಲಿ ಕ್ಯಾಂಪ್ ಹಾಕುತ್ತಿದ್ದರೆ ಸಂಗೀತಗಾರರು ಆಗಿನ ಸಂಸ್ಥಾನಿಕರ ಮತ್ತು ಶ್ರೀಮಂತರ ಮನೆಗಳಲ್ಲಿ ಹಾಡುತ್ತಿದ್ದರಿಂದ ಅಲ್ಲಿ ಜನಸಾಮಾನ್ಯರಿಗೆ ಪ್ರವೇಶ ಸುಲಭಸಾಧ್ಯವಾಗಿರಲಿಲ್ಲ. ಎಲ್ಲಿಯೋ ದೂರದೇಶದಲ್ಲಿರುವ ಉಸ್ತಾದ ಅಬ್ದುಲ್ ಕರೀಂಖಾನರಂಥವರ ಹಾಡನ್ನು ಕೇಳುವುದು ಅವರಿಗೆ ಸುಲಭವಾದುದಾಗಿರಲಿಲ್ಲ. ಅವರು ಕೇಳಬಯಸುತ್ತಿದ್ದ ಹಾಡುಗಳನ್ನೇ ಕುಮಾರ ಯಥಾವತ್ತಾಗಿ ಹಾಡುತ್ತಿದ್ದುದರಿಂದ ಅವರ ಬಯಕೆ ತಣಿಯುತ್ತಿತ್ತು. ಹಾಗಾಗಿ ಜನ ಅವನ ಹಾಡಿಗೆ ಹಾತೊರೆಯತೊಡಗಿದರು. ತಿಕೀಟು ಖರೀದಿಸಿ ಇವನ ಹಾಡು ಕೇಳಲು ಬರತೊಡಗಿದರು. ಶಿವಪುತ್ರನ ಖ್ಯಾತಿ ಬೆಳೆದಂತೆಲ್ಲ ಕಾರ್ಯಕ್ರಮಗಳ ಸಂಖ್ಯೆಯೂ ಹೆಚ್ಚತೊಡಗಿತು. ಕುಮಾರ ಸಿದ್ಧರಾಮಯ್ಯನವರ ಕುಟುಂಬದ ಆದಾಯದ ಮೂಲವಾದ. ಕೀರ್ತಿರಾಗ ಆರೋಹಣದಲ್ಲಿ ವಿಸ್ತಾರಗೊಳ್ಳತೊಡಗಿತ್ತು.

ಒಂದು ದಿನ ತಂದೆ ಸಿದ್ಧರಾಮಯ್ಯನವರು ಶಿವಪುತ್ರನನ್ನು ಇದ್ದಕ್ಕಿದ್ದ ಹಾಗೆ ಬೆಳಗಾವಿಯ ಹತ್ತಿರವಿರುವ ಹಿರೇಬಾಗೇವಾಡಿಗೆ ಹೊರಡಿಸಿದರು. ಅಲ್ಲಿ ಗುರುಮಠಕಲ್‌ನ ಶಾಂತವೀರ ಮಹಾಸ್ವಾಮಿಗಳು ಆಗಮಿಸಿದ್ದರು. ಅವರೆದುರು ಶಿವಪುತ್ರ ಹಾಡಿದ.



ಕುಮಾರಗಂಧರ್ವ ಹಾಗೂ ಆತನ ಜೊತೆಗೆ ತಬಲಾ ನುಡಿಸುತ್ತಿರುವ ರಾಮಕೃಷ್ಣ ಬೋಂದ್ರೆ

ಅದೊಂದು ಅಮೃತಗಳಿಗೆ. ಬಾಲಕ ಶಿವಪುತ್ರನ ಹಾಡನ್ನು ಕೇಳಿದ ಸ್ವಾಮಿಗಳು ತಲೆದೂಗಿದರು. ಎಲ್ಲವೂ ಪೂರ್ವನಿಯೋಜಿತವೇನೋ ಎಂಬಂತೆ ಸ್ವಾಮಿಗಳು ಆಶೀರ್ವದಿಸಿ ಬಂಗಾರದ ಪದಕವೊಂದನ್ನು ನೀಡಿದರು. ಆ ಪದಕದಲ್ಲಿ 'ಕುಮಾರ ಗಂಧರ್ವ" ಎಂಬ ಕೆತ್ತನೆಯಿತ್ತು. ಸ್ವಾಮಿಗಳು ಆಶೀರ್ವದಿಸಿ ನೀಡಿದ ಈ ಕಿತಾಬು ಶಿವಪುತ್ರನ ಅದೃಷ್ಟವನ್ನೇ ಬದಲಾಯಿಸಿತು. ಅಂದಿನಿಂದ ಶಿವಪುತ್ರಯ್ಯ ಸಿದ್ಧರಾಮಯ್ಯ ಕೋಮಕಾಳಿಮಠ ಎಂಬ ಹೆಸರು ಮಂದ್ರಕ್ಕಿಳಿದು, 'ಕುಮಾರ ಗಂಧರ್ವ'ನೆಂಬ ಅಭಿದಾನವೇ ಸ್ಥಿರವಾಯಿತು.[2] ಕೆಲವರು ಅದನ್ನು ಇನ್ನಷ್ಟು ಸಂಕ್ಷಿಪ್ತಗೊಳಿಸಿ 'ಕುಮಾರ' ಎಂದೇ ಕರೆಯಲಾರಂಭಿಸಿದರು. ಈ ಘಟನೆಯನ್ನು ಕುಮಾರರು ನೆನಪಿಸಿಕೊಳ್ಳುತ್ತಾರೆ. "ನಮ್ಮ ಊರಿನ ಸಮೀಪ ಬಾಗೇವಾಡಿ ಎಂಬ ಊರಿದೆ. ಅಲ್ಲಿ ಶಾಂತವೀರ ಸ್ವಾಮಿಗಳು ಆಗಮಿಸಿದ್ದರು. ಅವರೆದುರು ಹಾಡುವಂತೆ ನನ್ನ ತಂದೆ ಹೇಳಿದರು. ನನಗೆ ಆ ನೆನಪು ಚೆನ್ನಾಗಿದೆ. ಆ ದಿನ ನಾವು ಮೋಟಾರಿನಿಂದ ಆ ಊರಿಗೆ ಹೋಗಿದ್ದೆವು. ನನಗಾಗ ಏಳು ವರ್ಷ. ನನ್ನ ಹಾಡು ಕೇಳಿದ ಮೇಲೆ ಸ್ವಾಮಿಗಳು ನನಗೆ 'ಕುಮಾರ ಗಂಧರ್ವ' ಎಂಬ ಕಿತಾಬು ನೀಡಿದರು. ಇದಾದ ನಂತರವೇ ನಾನು ಹೆಚ್ಚು ಪ್ರಸಿದ್ಧಿಗೆ ಬಂದೆ. ಆಮೇಲೆ ನನ್ನ ಹಾಡು ಕೇಳಲು ಜನ ತಿಕೀಟು ತೆಗೆದುಕೊಂಡು ಬರಲಾರಂಭಿಸಿದರು."

ಬಾಲಕ ಶಿವಪುತ್ರಯ್ಯ ಸಿದ್ಧರಾಮಯ್ಯ ಕೋಮಕಾಳಿಮಠನಿಗೆ 'ಕುಮಾರ ಗಂಧರ್ವ' ಎಂಬ ಬಿರುದು ದೊರೆತಾಗ ಹಿಂದುಸ್ತಾನಿ ಸಂಗೀತಲೋಕದಲ್ಲಿ ಆಗಲೇ ನಾಲ್ವರು 'ಗಂಧರ್ವ' ಪದವಿಯಿಂದ ಹೆಸರುವಾಸಿಯಾಗಿದ್ದರು. ಧ್ರುಪದ

ಗಾಯಕ ಉಸ್ತಾದ ರಹಿಮತ್‌ಖಾನರು 'ಭೂಗಂಧರ್ವ' ಎಂದು ಪ್ರಸಿದ್ಧರಾಗಿದ್ದರು. ಸಂಗೀತಲೋಕದ ತ್ರಿವೇಣಿ ಸಂಗಮ ಎಂದೇ ಖ್ಯಾತರಾಗಿದ್ದ ಭಾಸ್ಕರಬುವಾ ಬಖಲೆ 'ದೇವಗಂಧರ್ವ' ಎಂದು ಹೆಸರಾಗಿದ್ದರು. ಮಹಾರಾಷ್ಟ್ರದ ಸುಪ್ರಸಿದ್ಧ ರಂಗನಟ–ಗಾಯಕ ನಾರಾಯಣರಾವ ರಾಜಹಂಸರವರು 'ಬಾಲಗಂಧರ್ವ' ಎಂಬ ಕಿತಾಬನ್ನು ಪಡೆದಿದ್ದರು. ಕರ್ನಾಟಕದ ಕುಂದಗೋಳ ಗ್ರಾಮದ ರಾಮಭಾವು ಸಂಶಿ ಎಂಬ ಸುಪ್ರಸಿದ್ಧ ಗಾಯಕ ನಟ 'ಸವಾಯಿ ಗಂಧರ್ವ' ಎಂದು ಹೆಸರುವಾಸಿಯಾಗಿದ್ದರು. ಈ ಸಾಲಿಗೆ ಕರ್ನಾಟಕದ ಮತ್ತೊಂದು ಕೊಡುಗೆಯಾಗಿ ಬಾಲಕ ಶಿವಪುತ್ರಯ್ಯ ಸಿದ್ಧರಾಮಯ್ಯ ಕೋಮಕಾಳಿಮಠ 'ಕುಮಾರಗಂಧರ್ವ' ಎಂಬ ಹೆಸರಿನೊಂದಿಗೆ ಸೇರ್ಪಡೆಗೊಂಡರು. ಹೀಗೆ ಹಿಂದುಸ್ತಾನಿ ಸಂಗೀತ ಲೋಕದಲ್ಲಿ ಸುಪ್ರಸಿದ್ಧರಾಗಿರುವ 'ಗಂಧರ್ವ'ರಲ್ಲಿ ಅರ್ಧಪಾಲು ಕರ್ನಾಟಕಕ್ಕೆ ಸಲ್ಲುತ್ತದೆ ಎಂಬುದು ಹೆಮ್ಮೆಪಡಬೇಕಾದ ಸಂಗತಿ. ಕುಮಾರಗಂಧರ್ವ, ಸವಾಯಿಗಂಧರ್ವರನ್ನು ಹೊರತುಪಡಿಸಿ ಉಳಿದೆಲ್ಲ ಗಂಧರ್ವರು ಕರ್ನಾಟಕದ ಆಶ್ರಯದಲ್ಲಿ ಕೆಲವು ಕಾಲ ಇದ್ದವರು ಎಂಬುದು ಸಹ ಮಹತ್ವದ ಸಂಗತಿ. ಭೂಗಂಧರ್ವರು ಹುಬ್ಬಳ್ಳಿಯ ಸಿದ್ಧಾರೂಢ ಮಠದಲ್ಲಿ ಕೆಲವು ಕಾಲ ತಂಗಿದ್ದರೆ, ದೇವಗಂಧರ್ವರು ಧಾರವಾಡದ ಗಂಡುಮಕ್ಕಳ ಟ್ರೇನಿಂಗ್ ಕಾಲೇಜಿನಲ್ಲಿ ಎಂಟು ವರ್ಷ ಸಂಗೀತ ಶಿಕ್ಷಕರಾಗಿದ್ದರು. ಬಾಲಗಂಧರ್ವರು ಕರ್ನಾಟಕದ ಬೆಳಗಾವಿ, ಧಾರವಾಡ, ಗದಗ, ಹುಬ್ಬಳ್ಳಿ ಮೊದಲಾದೆಡೆ ನಾಟಕಕಂಪನಿಯ ಕ್ಯಾಂಪುಗಳನ್ನು ಮಾಡಿ ರಂಗಸೇವೆ ಗೈದಿದ್ದಾರೆ. ಈ ದೃಷ್ಟಿಯಿಂದ ಕರ್ನಾಟಕ ಗಂಧದ ನಾಡೂ ಹೌದು, ಗಂಧರ್ವರ ನಾಡೂ ಹೌದು.

ಬಾಲಕ ಶಿವಪುತ್ರನ ಕೀರ್ತಿ ಹೆಚ್ಚುತ್ತಲೇ ಶಿವಪುತ್ರನೆಂಬ ಅಭಿದಾನ ಮರೆಯಾಗಿ ಕುಮಾರ ಗಂಧರ್ವ ಎಂಬ ಹೆಸರೇ ಹೆಸರುವಾಸಿಯಾಯಿತು. ಈತ ಪಡೆದುಕೊಂಡ ಜನಪ್ರಿಯತೆ ಕೀರ್ತಿ ಪ್ರತಿಭೆಗಳನ್ನು ತಂದೆ ಸಿದ್ಧರಾಮಯ್ಯನವರು ವ್ಯವಹಾರಕ್ಕಾಗಿ ಬಳಸಿಕೊಳ್ಳತೊಡಗಿದರು. 'ಕುಮಾರಗಂಧರ್ವ ಅಂಡ್ ಪಾರ್ಟಿ' ಎಂಬ ಹೆಸರಿನಿಂದ ಜಲಸಾಗಳು ನಡೆಯತೊಡಗಿದವು. ಅಸಂಖ್ಯಾತ ಕಾರ್ಯಕ್ರಮಗಳು ಆಯೋಜನೆಗೊಂಡವು. ಪ್ರಾರಂಭಿಕ ದಿನಗಳಲ್ಲಿ ಉತ್ತರ ಕರ್ನಾಟಕಕ್ಕೆ ಮಾತ್ರ ಸೀಮಿತವಾಗಿದ್ದ ಕುಮಾರಗಂಧರ್ವರ ಹಾಡಿನ ಕಾರ್ಯಕ್ರಮಗಳು ಕ್ರಮೇಣ ದಕ್ಷಿಣ ಮಹಾರಾಷ್ಟ್ರಕ್ಕೆ ಚಾಚಿಕೊಂಡು ಅಲ್ಲಿಂದ ಪುಣೆ ಮುಂಬೈವರೆಗೂ ತಲುಪಿದುವು. ಅಲ್ಲಿಂದ ಮುಂದೆ ಉತ್ತರ ಭಾರತದಲ್ಲೂ ಕಾರ್ಯಕ್ರಮಗಳು ಆಯೋಜನೆಗೊಂಡುವು. ಆಗಿನ ಕಾಲದಲ್ಲಿ ಕುಮಾರಗಂಧರ್ವ ಅಂಡ್ ಪಾರ್ಟಿ ತನ್ನ ಎಲ್ಲ ವೆಚ್ಚಗಳನ್ನು ಕಳೆದು ಒಂದೂವರೆಯಿಂದ ಎರಡು ಸಾವಿರ ರೂಪಾಯಿಗಳಷ್ಟು ಹಣವನ್ನು ಉಳಿಸಿಕೊಳ್ಳುತ್ತಿತ್ತು.

1935ನೆಯ ಇಸವಿ, ಕುಮಾರರ ಜೀವನದಲ್ಲಿ ಅತ್ಯಂತ ಮಹತ್ವದ ವರ್ಷ. ಆ ವರ್ಷ ಅವರು ಅಲಹಾಬಾದ್, ಕೊಲ್ಕತ್ತಾ ಹಾಗೂ ಮುಂಬೈಗಳಲ್ಲಿ ಕಾರ್ಯಕ್ರಮಗಳನ್ನು ನೀಡಿದರು ಮತ್ತು ಈ ಎಲ್ಲ ಕಾರ್ಯಕ್ರಮಗಳು ವ್ಯಾಪಕವಾದ ಚರ್ಚೆಗೆ ಕಾರಣವಾದುವು. ಭಾರತದ ಅತ್ಯಂತ ಮಹತ್ವದ ಸಮ್ಮೇಳನಗಳಲ್ಲಿ ನೀಡಿದ ಈ ಕಾರ್ಯಕ್ರಮಗಳು

ಸಂಗೀತದ ಕ್ಷೇತ್ರದಲ್ಲಿ ಕೋಲಾಹಲವನ್ನೇ ಉಂಟುಮಾಡಿದುವು. 11 ವರ್ಷದ ಬಾಲಕನ ಅತ್ಯದ್ಭುತ ಪ್ರತಿಭೆಯನ್ನು ಕಂಡವರೆಲ್ಲ ಬೆರಗಾದರು.[3]

ಪ್ರಯಾಗ ಸಂಗೀತ ಸಮಿತಿ 1935ರಲ್ಲಿ ಅಖಿಲಭಾರತ ಮಟ್ಟದ ಸಂಗೀತ ಸಮ್ಮೇಳನವನ್ನು ಆಯೋಜಿಸಿತ್ತು. ಈ ಸಮ್ಮೇಳನದಲ್ಲಿ ಹಾಡುವುದಕ್ಕಾಗಿ ಜರಿಯ ಟೊಪ್ಪಿಗೆ, ಶೇರವಾನಿ ತೊಟ್ಟ ಇಬ್ಬರು ಬಾಲಕರು ವೇದಿಕೆಯನ್ನೇರಿದರು. ಒಬ್ಬ ಹಾಡುಗಾರ, ಇನ್ನೊಬ್ಬ ತಬಲಾ ಸಾಥಿ ನೀಡುವವ. ಹಾಡಲಿರುವ ಬಾಲಕ ಕುಮಾರಗಂಧರ್ವ ಎಂದು ಬೇರೆ ಹೇಳಬೇಕಿಲ್ಲ. ತಬಲಾ ನುಡಿಸುವ ಬಾಲಕನ ಹೆಸರು ರಾಮಕೃಷ್ಣ ಬೋಂದ್ರೆ. ತಂಬೂರಿಗಳು ಶ್ರುತಿಗೊಂಡುವು. ಕುಮಾರ ತನ್ನ ಗಂಟಲನ್ನು ಸರಿಪಡಿಸಿಕೊಳ್ಳಲೋ ಎಂಬಂತೆ ಒಮ್ಮೆ ಮೆಲ್ಲನೆ ಖೇಕರಿಸಿದ. ನಂತರ ಶೇರವಾನಿಯ ಗುಂಡಿಗಳನ್ನು ಸರಿಪಡಿಸಿಕೊಂಡ. ಹಿರಿಯ ಗಾಯಕ ಉಸ್ತಾದ ಅಬ್ದುಲ್ ಕರೀಂಖಾನ ಸಾಹೇಬರು ವೇದಿಕೆಯ ಮೇಲೆ ಮಾಡುತ್ತಿದ್ದ ಎಲ್ಲ 'ಆಕ್ಷನ್'ಗಳನ್ನು ಆತ ಹೂಬೇಹೂಬ್ ಮಾಡತೊಡಗಿದ. ಇದನ್ನೆಲ್ಲ ನೋಡಿದ ಜನಕ್ಕೆ ಇನ್ನಿಲ್ಲದ ಆಶ್ಚರ್ಯ. ಮೊದಲ ಸಾಲಿನಲ್ಲಿ ಕುಳಿತಿದ್ದ ಸುಪ್ರಸಿದ್ಧ ಗಾಯಕರಾದ ಉಸ್ತಾದ ಫೈಯಾಜ್‌ಖಾನರು ಹಾಗೂ ಕುಂದನಲಾಲ ಸೈಗಲ್‌ರ ಹುಬ್ಬುಗಳು ಮೇಲೇರಿ ಕೆಳಗಿಳಿದುವು. ಆ ಕಾಲದಲ್ಲಿ ಉಸ್ತಾದ ಅಬ್ದುಲ್ ಕರೀಂಖಾನ ಸಾಹೇಬರು ಹಾಡಿದ 'ಉಗೀಚ ಕಾ ಕಾಂತಾ' ಎಂಬ ನಾಟ್ಯಗೀತೆ ತುಂಬ ಪ್ರಸಿದ್ಧವಾಗಿತ್ತು. ಕುಮಾರ ಅದನ್ನೇ ಹಾಡತೊಡಗಿದ. ಉಸ್ತಾದ ಅಬ್ದುಲ್ ಕರೀಂಖಾನ ಸಾಹೇಬರು ರೆಕಾರ್ಡಿನಲ್ಲಿ ಹಾಡಿರುವಂತೆಯೇ, ಚಾಚೂ ತಪ್ಪದೆ, ಇದೇ ಮೂಲಗಾಯನವೇನೋ ಎಂಬಂತೆ ಹಾಡತೊಡಗಿದಾಗ ಜನ ಅವಾಕ್ಕಾದರು. ಹಾಡು ಮುಗಿದ ತಕ್ಷಣ ಉಸ್ತಾದ ಫೈಯಾಜ್‌ಖಾನರು ತಮ್ಮ ಆನಂದವನ್ನು ವ್ಯಕ್ತಪಡಿಸುತ್ತ ಹೇಳಿದರು, "ಬೇಟಾ, ಮೈ ಜಾಗೀರ ಹೋತಾ ತೋ ಅಪನಿ ಜಾಗಿರ ತುಝ್ ಪರ ಲುಟಾ ದೇತಾ." (ಮಗು, ನಾನು ಶ್ರೀಮಂತನಾಗಿದ್ದರೆ ನನ್ನ ಸಿರಿಯನ್ನೆಲ್ಲ ನಿನ್ನ ಮೇಲೆ ಸೂರೆಗೊಳ್ಳುತ್ತಿದ್ದೆ.) ಕನ್ನಡವೊಂದುಳಿದು ಅನ್ಯಭಾಷೆಯ ಅರಿವಿಲ್ಲದ ಕುಮಾರ ಅವರೆದುರು ವಿನಮ್ರನಾಗಿ ನಿಂತುಕೊಂಡ. ಪಕ್ಕದಲ್ಲಿದ್ದ ಕುಂದನಲಾಲ ಸೈಗಲ್ ಹೇಳಿದರು " ಎರಡು ತಿಂಗಳ ನಂತರ ಕಲ್ಕತ್ತೆಯಲ್ಲಿ ದೊಡ್ಡ ಪ್ರಮಾಣದ ಸಂಗೀತ ಸಮ್ಮೇಳನವಿದೆ. ಅಲ್ಲಿಗೆ ಕರೆತನ್ನಿ." ಕುಮಾರನ ತಂದೆ ಒಪ್ಪಿಗೆಯಿಂದ ತಲೆ ಅಲ್ಲಾಡಿಸಿದರು.

ಎರಡು ತಿಂಗಳ ತರುವಾಯ ಕುಮಾರನ ಸವಾರಿ ಕೊಲ್ಕತ್ತೆಗೆ ಆಗಮಿಸಿತು. ಇಡೀ ತಂಡವೇ ಕುಮಾರನೊಂದಿಗಿತ್ತು. ಕುಂದನಲಾಲ ಸೈಗಲ್‌ರವರು ನೀಡಿದ ಭರವಸೆಯಂತೆ ಕುಮಾರ ಕೊಲ್ಕತ್ತೆಯ ಸಂಗೀತ ಸಮ್ಮೇಳನದಲ್ಲಿ ಹಾಡುವುದಕ್ಕೆ ಅವಕಾಶ ನೀಡಲಾಗಿತ್ತು. ಹೊಸ ವಾತಾವರಣ – ಹೊಸ ಕೇಳುಗರು.

ಕಾರ್ಯಕ್ರಮದ ನಿರೂಪಕ, ಕೋಲ್ಕತ್ತಾ ವಿದ್ಯಾಪೀಠದ ಕುಲಗುರು ಡಾ.ದಕ್ಷಿಣಾರಂಜನ ಭಟ್ಟಾಚಾರ್ಯರು ಕುಮಾರರ ಹೆಸರನ್ನು ಕೂಗಿದಾಗ ಶ್ರೋತೃಗಳಲ್ಲಿ ಮೂಡಿದ ಪ್ರಶ್ನೆ 'ಯಾರು ಈ ಕುಮಾರ ಗಂಧರ್ವ?' ಹನ್ನೊಂದು ವರ್ಷದ ಬಾಲಕ ತನ್ನ ಜೊತೆಗಾರನೊಂದಿಗೆ ವೇದಿಕೆಯನ್ನೇರಿ ಉಸ್ತಾದ ಅಬ್ದುಲ್ ಕರೀಂಖಾನ್ ಸಾಹೇಬರಂತೆ



ಕುಮಾರಗಂಧರ್ವರ ಗಾಯನದ ಇನ್ನೊಂದು ಚಿತ್ರ

ವರ್ತನೆಗಳನ್ನು ತೋರತೊಡಗಿದಾಗ ಕೇಳುಗರು ಮತ್ತಷ್ಟು ಗಲಿಬಿಲಿಗೊಂಡರು. ಕೆಲವರಂತೂ ಇವನ ವರ್ತನೆಯನ್ನು ಕಂಡು ಹೊಟ್ಟೆ ಹಿಡಿದುಕೊಂಡು ನಗತೊಡಗಿದರು. ಆದರೆ, ಅದೇ ಜನ ಕುಮಾರ ಹಾಡತೊಡಗಿದಾಗ ಮಂತ್ರಮುಗ್ಧರಾಗಿ ಕೇಳತೊಡಗಿದರು. ಕುಮಾರ ಉಸ್ತಾದ ಅಬ್ದುಲ್ ಕರೀಂಖಾನ್ ಸಾಹೇಬರು ಹಾಡಿದ ಝಿಂಝೋಟಿ ರಾಗದ 'ಪಿಯಾಬಿನ ಆವತ ನಾಹಿ ಚೈನ' ಠುಮರಿಯನ್ನು ಎತ್ತಿಕೊಂಡ. ಇದೇ ಠುಮರಿಯನ್ನು ಕುಂದನಲಾಲ ಸೈಗಲ್‌ರು 'ದೇವದಾಸಿ' ಸಿನಿಮಾದಲ್ಲೂ ಹಾಡಿದ್ದರು. ಕುಮಾರನ ಠುಮರಿ ಮುಂದುವರಿದಂತೆ ಜನ ದಾದ್ ನೀಡತೊಡಗಿದರು. ವಾಹ್‌ವಾ, ಕ್ಯಾಬಾತ್ ಹೈ, ಕಮಾಲ್ ಕರ್‌ದಿಯಾ, ಬಹುತ್ ಅಚ್ಛಾ ಮುಂತಾದ ಉದ್ಗಾರಗಳು ಹೊಮ್ಮತೊಡಗಿದುವು. ಠುಮರಿ ಮುಗಿದಾಗ ಕಿವಿ ಗಡಚಿಕ್ಕುವ ಚಪ್ಪಾಳೆ! ಕೆಲವು ಶ್ರೀಮಂತ ರಸಿಕರಂತೂ ತಮ್ಮಲ್ಲಿದ್ದ ಬೆಲೆಬಾಳುವ ಶಾಲು, ಉಂಗುರ, ಗಡಿಯಾರ ಹಾಗೂ ಹಣವನ್ನು ಇವನಿಗಿತ್ತು ಸಂತೋಷವನ್ನು ವ್ಯಕ್ತಪಡಿಸಿದರು.

ಕಲ್ಕತ್ತೆಯ ಆ ಸಂಗೀತ ಸಮ್ಮೇಳನದಲ್ಲಿ ಪಂ. ಬಿ.ಆರ್. ದೇವಧರರೂ ಉಪಸ್ಥಿತರಿದ್ದರು. ಶ್ರೋತೃಗಳ ಸಾಲಿನಲ್ಲಿ ಕುಳಿತು ತದೇಕ ಚಿತ್ತದಿಂದ ಕುಮಾರನ ಹಾಡನ್ನು ಕೇಳುತ್ತಿದ್ದರು. 1935ನೆಯ ಇಸವಿ ಡಿಸೆಂಬರ್ ತಿಂಗಳಿನಲ್ಲಿ ಅವರೇ ಮುಂಬಯಿಯಲ್ಲಿ ಆಯೋಜಿಸಿದ್ದ ಸಂಗೀತ ಸಮ್ಮೇಳನದಲ್ಲಿ ಹಾಡುವಂತೆ ಆಹ್ವಾನಿಸಿದರು. ಮುಂದೆ ಕುಮಾರರು ಪಂ. ದೇವಧರರಲ್ಲಿಯೇ ಹನ್ನೆರಡು ವರುಷಗಳ ಕಾಲ ಸಂಗೀತಾಧ್ಯಯನ ಮಾಡಿದರು. ಕಲ್ಕತ್ತೆಯಲ್ಲಿ ಕುಮಾರನಿಗೆ ಆಹ್ವಾನವಿತ್ತಾಗ ಅವರಿಬ್ಬರಲ್ಲಿ ಪರಸ್ಪರ ಗುರು–